# ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷಾ ತಯಾರಿ ಶಿಬಿರ

ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಉಡುಪಿಯ ಶಿಕ್ಷಣ ಮತ್ತು ತರಬೇತಿ ವೇದಿಕೆಯ ವತಿಯಿಂದ ನಮ್ಮ ಸಮಾಜದ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷಾ ತರಬೇತಿ ಕಾರ್ಯಕ್ರಮವು ದಿನಾಂಕ 02-03-2008ರಂದು ಶಾರದಾ ಮಂಟಪದಲ್ಲಿ ಜರುಗಿತು. ಮುಂಜಾನೆಯ ಸಭಾ ಕಾರ್ಯಕ್ರಮದಲ್ಲಿ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್‌ರವರು ಕಾರ್ಯಕ್ರಮದ ಪ್ರಯೋಜನವನ್ನು ಪಡೆಯುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಸಂಘದ ಕಾರ್ಯದರ್ಶಿ ವೈ. ಭುವನೇಂದ್ರರಾವ್ ಹಾಗೂ ಶಿಕ್ಷಣ ಮತ್ತು ತರಬೇತಿ ವೇದಿಕೆಯ ಅಧ್ಯಕ್ಷರಾದ ಡಾ। ರವೀಂದ್ರನಾಥರಾವ್ ಉಪಸ್ಥಿತರಿದ್ದರು.

ವಿಜ್ಞಾನ-1 ಪ್ರಶ್ನೆ ಪತ್ರಿಕೆಯ ನೀಲ ನಕಾಶೆ ಹಾಗೂ ಪ್ರಶ್ನೆಗಳನ್ನು ಉತ್ತರಿಸುವ ಕಾರ್ಯಕ್ರಮವನ್ನು ಮಣಿಪಾಲ ಪದವಿಪೂರ್ವ ಕಾಲೇಜಿನ ಶ್ರೀ ನಾಗೇಂದ್ರ ಪೈಯವರು ನಡೆಸಿಕೊಟ್ಟರು. ಗಣಿತ ವಿಷಯದ ಪ್ರಮುಖ ಅಂಶಗಳನ್ನು ಹಾಗೂ ಉತ್ತರಿಸುವ ಕ್ರಮಗಳನ್ನು ಮಣಿಪಾಲ ಪದವಿಪೂರ್ವ ಕಾಲೇಜಿನ ನಿವೃತ್ತ ಉಪಪ್ರಾಂಶುಪಾಲರಾದ ಶ್ರೀ ಎಚ್. ನಿರಂಜನ್ ರಾವ್ ನೆರವೇರಿಸಿದರು.

ಮಧ್ಯಾಹ್ನ ಊಟದ ನಂತರ ಜರುಗಿದ ವಿಜ್ಞಾನ ದ್ವಿತೀಯ ಪತ್ರಿಕೆಯ ಚಿತ್ರಗಳ ವಿವರಣೆ ಹಾಗೂ ನೀಲ ನಕಾಶೆಯ ಮಾಹಿತಿಯನ್ನು ಮಣಿಪಾಲ ಪದವಿ ಪೂರ್ವ ಕಾಲೇಜಿನ ಅಧ್ಯಾಪಕ ಶ್ರೀ ಪಿ. ಪ್ರಭಾಕರ ಭಂಡಿ ನೀಡಿದರು. ಪರೀಕ್ಷಾ ತಯಾರಿ ಶಿಬಿರದ ಕುರಿತು ವಿದ್ಯಾರ್ಥಿಗಳು ಕೊನೆಯಲ್ಲಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.



## ವಿದ್ಯಾರ್ಥಿ ಜೀವನದಲ್ಲಿ ಕಾನೂನಿನ ಪಾತ್ರ-ಉಪನ್ಯಾಸ ಕಾರ್ಯಕ್ರಮ

ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ ಇದರ ಶಿಕ್ಷಣ ಮತ್ತು ತರಬೇತಿ ವೇದಿಕೆ ವತಿಯಿಂದ ತಾ.02-03-2008ರಂದು 'ವಿದ್ಯಾರ್ಥಿ ಜೀವನದಲ್ಲಿ ಕಾನೂನಿನ ಪಾತ್ರ' ಎಂಬ ವಿಷಯದ ಬಗ್ಗೆ ಉಪನ್ಯಾಸ ಕಾರ್ಯಕ್ರಮವು ಜ್ಞಾನಮಂದಿರದಲ್ಲಿ ನಡೆಯಿತು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಕೆ. ದೇಜಪ್ಪ, ಅಡ್ವೋಕೇಟ್ ಇವರು ಆಗಮಿಸಿದ್ದರು. ಇವರು ಹಲವು ಸೂಕ್ತ ಇತ್ತೀಚಿನ ಉದಾಹರಣೆಗಳೊಂದಿಗೆ ಆಸಕ್ತಿಯುತವಾಗಿ ವಿವರಣೆ ನೀಡಿದರು. ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ ಸಿ.ಎಸ್.ರಾವ್, ಕಾರ್ಯದರ್ಶಿ ವೈ. ಭುವನೇಂದ್ರ ರಾವ್ ಉಪಸ್ಥಿತರಿದ್ದರು. ವೇದಿಕೆಯ ಅಧ್ಯಕ್ಷರಾದ ಡಾ। ವೈ. ರವೀಂದ್ರನಾಥರಾವ್ ಅತಿಥಿಗಳ ಪರಿಚಯದೊಂದಿಗೆ ಸ್ವಾಗತಿಸಿದರು. ಶ್ರೀ ವೇಣುಗೋಪಾಲ್‌ರಾವ್ ಧನ್ಯವಾದ ನೀಡಿದರು.

ಶ್ರೀಶಾರದಾ ದೇವಸ್ಥಾನದಲ್ಲಿ
ತಾ.12-04-2008ರ ಶನಿವಾರ
ಸಂಜೆ ಗಂಟೆ 5-30ರಿಂದ
**ಗಮಕವಾಚನ-ಪ್ರವಚನ**
ಕಾರ್ಯಕ್ರಮವು ನಡೆಯಲಿದೆ.
ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**
ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನ'ಕಾರ **ಶ್ರೀ ಬಾರ್ಕೂರು ನಾಗೇಶರಾವ್.**
ಸರ್ವರಿಗೂ ಆದರದ ಸ್ವಾಗತ
- ಶ್ರೀಶಾರದಾ ದೇವಸ್ಥಾನ ವೇದಿಕೆ

**ಸಾಮೂಹಿಕ ಗಣಹೋಮ**
ಶ್ರೀಶಾರದಾ ದೇವಸ್ಥಾನದಲ್ಲಿ
ಪ್ರತಿ ತಿಂಗಳು
**ಸಂಕಷ್ಟಹರ ಚತುರ್ಥಿಯಂದು**
ನಡೆಯುತಿರುವ
**ಸಾಮೂಹಿಕ ಗಣಹೋಮವು**
ತಾ.25-03-2008ರಂದು ಮತ್ತು
ಏಪ್ರಿಲ್ ತಿಂಗಳಲ್ಲಿ
24-04-2008ರಂದು ನಡೆಯಲಿದೆ.
**ಗಣಹೋಮ ಸೇವಾ ಶುಲ್ಕ ರೂ.51/-**
ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.
- ಶ್ರೀಶಾರದಾ ದೇವಸ್ಥಾನ ವೇದಿಕೆ

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
**ಫೋನ್ : 2556536 (R), 2555466 (O)**

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**
**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಅಗಲಿದ ಹಿರಿಯ ಚೇತನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ

ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘವು ಇತ್ತೀಚೆಗೆ ವಿಧಿವಶರಾದ ಹೊಸ್ಕೋಟೆಯ ಹಿರಿಯ ಚೇತನ ಅಪ್ಪು ಯಾನೆ ವಿಷ್ಣುಮೂರ್ತಿಯವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ಏರ್ಪಡಿಸಲಾಯಿತು. ಕಾರ್ಯಕ್ರಮವು ಸಂಘದ ಸ್ಥಾಪಕ ಅಧ್ಯಕ್ಷರಾದ ಶ್ರೀ ಎಚ್. ಹಿರಿಯಣ್ಣರಾವ್ ರವರ ಸಭಾಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಮಂಜುನಾಥ ಹೆಬ್ಬಾರ, ಉಪ್ಪಿನಕುದ್ರು, ಇವರು ಪ್ರಾಸ್ತಾವಿಕ ಭಾಷಣಗೈದರು. ಸಭಿಕರ ಪರವಾಗಿ ಶ್ರೀ ಎಚ್. ವೆಂಕಟೇಶರಾವ್ ಮತ್ತು ಕುಮಾರಿ ರಚನಾ ಮಾತನಾಡಿದರು. ಶ್ರೀ ಶೇಷಪ್ಪಯ್ಯ, ಶ್ರೀ ಗೋಪಾಡಿ ಹೆಬ್ಬಾರ ಬೈಂದೂರು, ಶ್ರೀ ಜೆ. ಎಚ್. ಶ್ರೀಕಂಠಯ್ಯನವರು ಮೃತರ ಕ್ರಿಯಾಶೀಲತೆಯ ಬಗ್ಗೆ ಮಾತನಾಡಿದರು.

ಮೃತರ ಪುತ್ರ ಶ್ರೀ ವಿಶ್ವೇಶ್ವರರಾವ್‌ರವರು ತಮ್ಮ ತಂದೆಯವರ ಹೆಸರಲ್ಲಿ ಸಂಘಕ್ಕೆ ದೇಣಿಗೆಯನ್ನು ಅಧ್ಯಕ್ಷರಾದ ಶ್ರೀ ಉಮೇಶ ಶ್ಯಾನುಭಾಗರಿಗೆ ಹಸ್ತಾಂತರಿಸಿದರು. ಶ್ರೀ ಜೆ. ಎಚ್. ಕೃಷ್ಣ ಗೋಪಾಲ, ಶ್ರೀ ಗೋಪಾಲರಾವ್, ಶ್ರೀ ಸತ್ಯನಾರಾಯಣರಾವ್ ಆರಗ, ಸಂಘದ ಕಾರ್ಯದರ್ಶಿ ಶ್ರೀ ರವೀಂದ್ರ ದೊಡ್ಮನೆ, ವೇದಿಕೆಯಲ್ಲಿ ಉಪಸ್ಥಿತರಿದ್ದರು. ಎಚ್. ಸುಬ್ರಹ್ಮಣ್ಯರಾವ್ ಕಾರ್ಯಕ್ರಮ ನಿರ್ವಹಿಸಿದರು. ಶ್ರೀಮತಿ ವಾಣಿ ಜಗದೀಶ ವಂದನಾರ್ಪಣೆ ಮಾಡಿದರು.

# 'ಯಕ್ಷಸೌಧ'ದ ಪ್ರವೇಶೋತ್ಸವ ಮತ್ತು ಹರಿಕಥೆ

ನಮ್ಮ ಸಮಾಜ ಬಾಂಧವರಾದ ಶ್ರೀ ಕೆ. ರಾಧಾಕೃಷ್ಣರಾವ್ ದಂಪತಿಗಳು ಮತ್ತು ಮಕ್ಕಳು ಉಡುಪಿ-ಕುಕ್ಕಿಕಟ್ಟೆಯಲ್ಲಿ ನಿರ್ಮಿಸಿದ ನೂತನ ಗೃಹ 'ಯಕ್ಷಸೌಧ'ದ ಪ್ರವೇಶೋತ್ಸವವನ್ನು ದಿನಾಂಕ 21-01-2008ರಂದು ನೆರವೇರಿಸಿದರು. ಇಲ್ಲಿಯೇ ನಿರ್ಮಿಸಿದ 'ಅಜಂತಾ ಕಾಂಪ್ಲೆಕ್ಸ್' ಇದರ ಉದ್ಘಾಟನೆ ಕಳೆದ ವರ್ಷವೇ ನಡೆದಿತ್ತು. 21-01-2008ರಂದು ಮಧ್ಯಾಹ್ನ ಶ್ರೀ ರಾಧಾಕೃಷ್ಣರಾವ್ ಅವರಿಗೆ 'ಭೀಮರಥಿ ಶಾಂತಿ', ಅನ್ನಸಂತರ್ಪಣೆ ಇತ್ಯಾದಿಗಳು ಸಂಪನ್ನಗೊಂಡು ಸಂಜೆ 5-30ರಿಂದ ಹರಿದಾಸ ಶ್ರೀ ಮ.ನಾ.ಹೆಬ್ಬಾರ ಇವರಿಂದ 'ಭಕ್ತ ಚಂದ್ರಹಾಸ' ಎಂಬ ಹರಿಕಥಾ ಕಾರ್ಯಕ್ರಮವಿತ್ತು. ಪಕ್ಕವಾದ್ಯದಲ್ಲಿ ನಮ್ಮ ಸಮಾಜ ಬಾಂಧವರೇ ಆದ ನೀಲಾವರ ಲಕ್ಷ್ಮೀನಾರಾಯಣರಾವ್ (ಹಾರ್ಮೋನಿಯಂ), ಶ್ರೀ ಕೂಡ್ಲಿ ದೇವದಾಸ್ (ಮೃದಂಗ) ಇವರುಗಳು ಸಹಕರಿಸಿದ್ದರು. ಹರಿಕಥಾ ನಂತರ ಸುಗಮ ಸಂಗೀತ, ಅಂಬಲಪಾಡಿ ಲಕ್ಷ್ಮೀಜನಾರ್ದನ ಯಕ್ಷಗಾನ ಸಂಘದವರಿಂದ 'ಭಸ್ಮಾಸುರ ಮೋಹಿನಿ' ಬಯಲಾಟ, ಚಿಕ್ಕ ಮಕ್ಕಳಿಂದ ನೃತ್ಯ ಕಾರ್ಯಕ್ರಮ, ಕೊನೆಯದಾಗಿ 'ಆರ್ಕೆಸ್ಟ್ರಾ' ಇತ್ಯಾದಿ ಕಾರ್ಯಕ್ರಮಗಳು ಸಾವಿರಾರು ಮಂದಿ ಪ್ರೇಕ್ಷಕರನ್ನು ರಂಜಿಸಿದವು.

ರಾತ್ರಿ ಸುಮಾರು ಮೂರು ಸಾವಿರಕ್ಕೂ ಮಿಕ್ಕಿದ ಜನಸಂದಣಿಗೆ ಶ್ರೀ ರಾಧಾಕೃಷ್ಣರಾವ್ ಮತ್ತು ಮಕ್ಕಳಿಂದ 'ಬಫೆ' ಊಟದ ವ್ಯವಸ್ಥೆಯಿತ್ತು. ಶ್ರೀಯುತರಿಗೆ ದೀರ್ಘಾಯುಸ್ಸು ಮತ್ತು ಆರೋಗ್ಯವನ್ನೂ ಇವರ ಕುಟುಂಬಕ್ಕೆ ಉತ್ತರೋತ್ತರವನ್ನು 'ಶ್ರೀಶಾರದಾ'ವು ಹಾರೈಸುತ್ತದೆ.

# ಡಾ। ದ. ರಾ. ಬೇಂದ್ರೆ, ಕಾವ್ಯ ಪುರಸ್ಕಾರ ಪ್ರದಾನ



ಡಾ। ದ. ರಾ. ಬೇಂದ್ರೆ, ಅವರ 111ನೇ ಜನ್ಮದಿನದ ಅಂಗವಾಗಿ ಗ್ರಾಮಾಂತರ ಬುದ್ಧಿ ಜೀವಿಗಳ ಬಳಗ ಮೈಸೂರು ಇವರು ಏರ್ಪಡಿಸಿದ್ದ ರಾಜ್ಯ ಮಟ್ಟದ ಕಾವ್ಯ ಸ್ಪರ್ಧೆಯಲ್ಲಿ ವಿಜಯಿಯಾದ ಶ್ರೀಕೃಷ್ಣಯ್ಯ ಅನಂತಪುರ ಅವರಿಗೆ ತಾ.03-02-2008 ರಂದು ಮೈಸೂರು ಪುರಭವನದಲ್ಲಿ ಜರಗಿದ ಡಾ.ದ.ರಾ. ಬೇಂದ್ರೆ ಸಾಹಿತ್ಯೋತ್ಸವ ಸಂದರ್ಭದಲ್ಲಿ ಡಾ। ಸಿ.ಪಿ.ಕೆ. ಅವರು ಡಾ। ದ.ರಾ. ಬೇಂದ್ರೆ ಕಾವ್ಯ ಪುರಸ್ಕಾರ ಪ್ರಧಾನ ಮಾಡಿದರು. ಸಾಹಿತ್ಯೋತ್ಸವವನ್ನು ಡಾ। ಎಚ್ಚೆಸ್ಕೆ ಉದ್ಘಾಟಿಸಿದರು. ಸಾಹಿತಿಗಳಾದ ಡಾ। ಎಂ. ಅಕಬರಾಲಿ, ಶ್ರೀಮತಿ ಸಿ.ಎನ್. ಮುಕ್ತಾ, ವಿದ್ಯಾಧರ ಮುತಾಲಿಕ ದೇಸಾಯಿ, ಡಾ। ಮಳಲಿ ವಸಂತಕುಮಾರ್, ಡಾ। ಬಿ. ರಾಜಪುರೋಹಿತ್, ಡಾ। ಲತಾ ರಾಜಶೇಖರ್ ಮುಂತಾದವರು ಉಪಸ್ಥಿತರಿದ್ದರು.

## ಸ್ಪಷ್ಟೀಕರಣ

ಕಳೆದ ಸಂಚಿಕೆಯಲ್ಲಿ **'ಅಧ್ಯಕ್ಷರ ಮಾತು'** ಲೇಖನದಲ್ಲಿ **ಠೇವಣಿ ಸಂಗ್ರಹ**ವನ್ನು ಈ ರೀತಿ ಓದಬೇಕಾಗಿ ವಿನಂತಿ.

ಠೇವಣಿ ಸಂಗ್ರಹ : 2002ರಲ್ಲಿ ಇದ್ದ ಒಟ್ಟು ಠೇವಣಿ ರೂ.18,16,000/- 2005ರಲ್ಲಿ ರೂ.24,68,000/-ಕ್ಕೆ ತಲುಪಿ 2007ರಲ್ಲಿ ರೂ.34,45,000/-ಕ್ಕೆ ಏರಿದೆ. ಈ ಮಧ್ಯೆ ವಿವಿಧ ಮೂಲಗಳಿಂದ ನಿಧಿ ಸಂಗ್ರಹಿಸಿ ಜ್ಞಾನಮಂದಿರದ ನಿರ್ಮಾಣಕ್ಕಾಗಿ ಸುಮಾರು ರೂ.13,00,000/- ಮತ್ತು ಶ್ರೀಶಾರದಾ ಮಂಟಪದ ನವೀಕರಣಕ್ಕಾಗಿ ರೂ.3,00,000/- ವಿನಿಯೋಗಿಸಲಾಗಿತ್ತು. ಆದಾಗ್ಯೂ 2007ರಲ್ಲಿ ಒಟ್ಟು ನಿರಖು ಠೇವಣಿಯಲ್ಲಿ ವಾರ್ಷಿಕ 20% ಪ್ರಗತಿ ಸಾಧಿಸಿರುವುದು ಗಮನಾರ್ಹ ಸಂಗತಿಯಾಗಿದೆ.

## ನಿಶ್ಚಿತ ಗುರಿ ಇದ್ದಾಗ ಯಶಸ್ಸು ಸಾಧ್ಯ : ವಿದ್ಯಾಸಾಗರ ತೀರ್ಥರು

(...1ನೇ ಪುಟದಿಂದ)

ಕೆ. ಮಾಧವರಾವ್ ಸ್ವಾಗತಿಸಿದರು. ಕುಸುಮಾ ಕಾರ್ಯಕ್ರಮ ನಿರ್ವಹಿಸಿದರು. ಎಸ್.ಶಿವಪ್ರಸಾದ್ ಶ್ಯಾನುಭೋಗ ವಂದಿಸಿದರು.

ತಾ.26-02-2008ನೇ ಮಂಗಳವಾರ ಸುರತ್ಕಲ್ ಮಲ್ಲಮಾರು ಶ್ಯಾನುಭೋಗರ ಕುಟುಂಬಿಕರು ಆರಾಧಿಸಿಕೊಂಡು ಬಂದಿರುವ ನಾಗಸನ್ನಿಧಿಯಲ್ಲಿ ವೇದಮೂರ್ತಿ ಶ್ರೀ ಎಚ್. ಬಾಲಕೃಷ್ಣಭಟ್ ಹಳೆಯಂಗಡಿ ಇವರ ನೇತೃತ್ವದಲ್ಲಿ ನಮ್ಮ ಪುರೋಹಿತರಾದ ವೇದಮೂರ್ತಿ ಶ್ರೀ ಉದಯಚಂದ್ರಭಟ್ ಹಳೆಯಂಗಡಿ ಇವರ ಉಪಸ್ಥಿತಿಯಲ್ಲಿ ಬೆಳಿಗ್ಗೆ 7-10ಕ್ಕೆ ನೂತನ ಶಿಲಾ ಬಿಂಬಪ್ರತಿಷ್ಠಾ ಕಲಶ ಹಾಗೂ ಅದೇ ದಿನ ರಾತ್ರಿ ನಾಗಪಾತ್ರಿ ಶ್ರೀ ನಾಗಾನಂದ ವಾಸುದೇವ ಆಚಾರ್ಯ, ಕಕ್ಕುಂಜೆ ಇವರ ನೇತೃತ್ವದಲ್ಲಿ ಮದ್ದೂರು ಶ್ರೀ ಕೃಷ್ಣಪ್ರಸಾದ್ ವೈದ್ಯ ಮತ್ತು ಬಳಗದವರಿಂದ ಅಷ್ಟಪವಿತ್ರ ನಾಗಮಂಡಲೋತ್ಸವವು ನೆರವೇರಿತು.